**ಸಾಕ್ಷಿಗೆ ದಿನಾಂಕ 10.04.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ M.R.H ವಕೀಲರಿಂದ**

ದಾವಾ ಸ್ವತ್ತಿನಲ್ಲಿ ವಾದಿಯ ತಂದೆ ಮೋಟನಾಯಕರವರು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಕಾಂತಮ್ಮರವರು ಬದುಕಿದ್ದಾಗ ತಮ್ಮ ಹೆಸರಿನಲ್ಲಿದ್ದ ಖಾತೆಯನ್ನು ಪ್ರಶ್ನಿಸಿ ಎಲ್.ಎನ್.ಡಿ 7/10 ಮತ್ತು 11 ರಂತೆ ಪ್ರಕರಣ ದಾಖಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ನನ್ನ ತಂದೆ ವಕೀಲರ ಮೂಲಕ ಹಾಜರಾಗಿದ್ದರು ಎಂದರೆ ಸರಿ. ಉಪವಿಭಾಗಾಧಿಕಾರಿಗಳ ಆದೇಶವನ್ನು ಪ್ರಶ್ನಿಸಿ

ಕಾಂತಮ್ಮ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಗಳ ಆದೇಶ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಆದೇಶವನುನ ನಾನು ಓದಿ ತಿಳಿದುಕೊಂಡಿಲ್ಲ. ಸದರಿ ಎರಡು ಆದೇಶಗಳ ಆಧಾರಿತವಾಗಿ ವ್ಯಾಜ್ಯ ಕಾರಣ ನಮೂದಿಸಿ ದಾವೆ ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ತನ್ನ ತಂದೆಯ ಕಾಲದಿಂದಲೂ ದಾವಾ ಸ್ವತ್ತಿನಲ್ಲಿ ಸ್ವಾಧೀನ ಮಾಲೀಕತ್ವದಲ್ಲಿದ್ದು ನಾವು ಸ್ವಾಧೀನಕ್ಕೆ ತೊಂದರೆ ನೀಡಿದ್ದರಿಂದ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಹೆಸರಿನಲ್ಲಿರುವ ಖಾತೆಯನ್ನು ಏಲ್ಲಿಯೂ ಸಹ ಪ್ರಶ್ನೆ ಮಾಡಿಲ್ಲ ಎಂದರೆ ಸರಿ.

ವಾದಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನಾಗಲಿ, ನನ್ನ ತಂದೆಯಾಗಲಿ, ಉಳಿದ ಪ್ರತಿವಾದಿಗಳಾಗಲಿ ದಾವಾ ಸ್ವತ್ತಿನಲ್ಲಿ ಎಂದಿಗೂ ಸಹ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ನಾನು ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**